ಸಾವಿತ್ರಿಯಂಗೆ ಚೆಂದಗಿತ್ತು. ಒಂದು ವರ್ಷದ ತನಕ ಮನೆಯಲ್ಲಿದ್ದ ಸಾವಿತ್ರಿ ಗಂಡನ ಜೊತೆ ಪಟೇಲರ ಹೊಲಕ್ಕೆ ಕೆಲಸಕ್ಕೆ ಹೊರಟಳು. ಜೊತೆಗೆ ಎಳೆಗೂಸು ಬಸರಾಜನ ಕರ್ಕೊಂಡು ಹೋಗುತ್ತಿದ್ದಳು. ಹಿಲಾಲಿನ ಬಾಬ್ತು, ಕೂಲಿ ಕಾಸಿಂದ ಅವರ ಸಂಸಾರ ಚಲೊತ್ತಾಗಿಯೆ ಸಾಗಿತ್ತು. ಸಾವಿತ್ರಿ ಕೂಲಿ ಕೆಲಸಕ್ಕೆ ಬಂದಿದ್ದೆ ಪಟೇಲಪ್ಪನ ಆಸೆ ಮತ್ತೆ ಗರಿಬಿಚ್ಚಿತು. ಕಾದ ಕುಲುಮೆಯಂತೆ ತಯಾರಾಗಿದ್ದ ಪಟೇಲನಿಗೆ ಹೇಗಾದರೂ ಸಾವಿತ್ರಿನ ಉಂಡು ಮುಗ್ಸೊದೆ ಮಹಾದಾಸೆಯಾಗಿತ್ತು. ಮೂರ್ನಾಲ್ಕು ವರ್ಷಗಳ ಕಾಲ ಹೊಂಚು ಹಾಕಿಯೇ ಬೇಟೆಗಾಗಿ ಕಾದು ಕೂತಿದ್ದ. ಸಾವಿತ್ರಿನ ಬಲವಂತಪಡಿಸೋದು ಅವನಿಗೆ ಬೇಕಿರಲಿಲ್ಲ. ಸುಂದರಿ ಸಾವಿತ್ರಿ ತಾನೇ ತಬ್ಬಿಕೊಂಡು ಮಲಗೋದು ಮತ್ತು ತಾನು ಮೈಮೇಲೆ ಎಳೆದುಕೊಳ್ಳುವ ಕನಸುಕಂಡು ಕಾದಿದ್ದ. ಆ ಕ್ಷಣಕ್ಕಾಗಿ ಎಷ್ಟು ವರ್ಷ ಬೇಕಾದರೂ ಕಾಯಲು ಸಿದ್ಧನಾಗಿದ್ದ.

ಸಾವಿತ್ರಿಯ ಮಗ ಬಸ್ಯ ಮುರ್ನಾಲ್ಕು ವರ್ಷದವನಾದ. ಅವನನ್ನು ಶಿಶುವಾರದಾಗೆ ಬಿಟ್ಟು ಸಣ್ಣೀರ ಮತ್ತು ಸಾವಿತ್ರಿ ಇಬ್ಬರೂ ಕೆಲಸಕ್ಕೆ ಹೋಗತೊಡಗಿದರು.

ಇದಕ್ಕಾಗಿಯೇ ಕಾದು ಕೂತಿದ್ದ ಪಟೇಲಪ್ಪ ಒಂದಿನ ಸಣ್ಣೀರನ ಬೆಳ್ಬೆಳಗ್ಗೆ ಪ್ಯಾಟೆಗೆ ಕಳ್ಸಿದ. ಸಾವಿತ್ರಿ ಒಬ್ಬಳೆ ಇರೋ ಹಾಗೆ ನೋಡ್ಕೊಂಡಿದ್ದ. ಸುತ್ತಮುತ್ತ ಹೊಲದಾಗೆ ಯಾರೂ ಇಲ್ಲದ ಹೊತ್ತು ನೋಡಿ ಮಿಷನ್ನಿನ ಮನೀಗೆ ಕರೆದು ಬಾಗಿಲು ಮುಚ್ಚಿ ಎದೆಗೆ ಕೈಹಾಕಿ ಮೊಲೆ ಹಿಚುಕತೊಡಗಿದ. ಅವಳನ್ನು ಮುಟ್ಟಿದ್ದೆ ಯಾವುದೊ ಹೊಸ ಉನ್ಮಾದ ಹೊಕ್ಕಂತೆ ಹುಚ್ಚನಾಗಿದ್ದ. ಸಾವಿತ್ರಿ ಚೀರಿ ಪಟೇಲನ ದೂಡಿ ಬಾಗಿಲು ತಗ್ದು ಓಡಿ ಬಂದಿದ್ದಳು. ಇದರಿಂದ ಅವನಿಗೆ ಬಹಳ ಅವಮಾನ ಆಗಿಹೋಗಿತ್ತು. ಸಾವಿತ್ರಿ ಹೀಗೆ ಒಪ್ಪದೆ ನಿರಾಕರಿಸಿಯಾಳು ಎಂಬ ಯೋಚನೆಯೂ ಅವನಿಗಿರಲಿಲ್ಲ. ಸಾವಿತ್ರಿ ತನ್ನೊಂದಿಗೆ ಆಡುತಿದ್ದ ಚೂರು ಸಲುಗೆಯ ಮಾತುಗಳನ್ನು ಅವನು ಒಪ್ಪಿಗೆಯೆಂದು ಭಾವಿಸಿಕೊಂಡಂತಿತ್ತು. ಹತ್ತಾರು ಹೆಂಗಸರನ್ನ ಸುಲಭದಲ್ಲೇ ಉಂಡಿದ್ದ ಅವನಿಗೆ ಸಾವಿತ್ರಿ ಹೊರಕ್ಕೆ ದೂಡಿದ್ದು ಮುಖಕ್ಕೆ ಹೊಡ್ದಂಗಾಗಿತ್ತು. ಅವನ ಇಂತಹ ಹಲವು ಹಂದಾಟಗಳ ಗೆಲುವಿಗೆ ಕೈಹಿಡಿದಿದ್ದ ಮಿಷನ್ನಿನ ಮನೆ ಇಂದು ಅವನ ಸೋಲನ್ನು ನೋಡಿತ್ತು. ಪಟೇಲಪ್ಪ ಅವಮಾನದಿಂದ ಉರಿಯತೊಡಗಿದ. ಬಲಾತ್ಕಾರಕ್ಕೆ ಸಾವಿತ್ರಿ ಎಷ್ಟರವಳು ಅಂತ ಯೋಚನೆ ಬಂದರೂ ಅವಳನ್ನು ಹಿಡಿದು ಮಲಗಿಸಿಕೊಳ್ಳುವ ಮನಸ್ಸು ಮಾಡಲಿಲ್ಲ. ಸಾವಿತ್ರಿಯಂತ ಸುಂದರಿ ಒಲಿದು ಮಲಗಿದ್ರೇನೆ ಸುಖ, ತನ್ನ ಚೂಪು ಮೀಸೆಗೊಂದು ಗತ್ತು ಎಂದು ಭಾವಿಸಿ ಅವಳನ್ನು ಹೋಗಲು ಬಿಟ್ಟು ಸಮಯಕ್ಕೆ ಹೊಂಚು ಹಾಕಿ ಕೂತ.

ಅದೇ ದಿನ ಸಂಜೆ 'ನಾ ಇನ್ಮೇಲೆ ಪಟೇಲ್ರ ಹೊಲಕ್ಕೆ ಬರಾಕಿಲ್ಲ ನೋಡು...' ಅಂದಿದ್ದೆ ಸಣ್ಣೀರ ಕುಡಿದ ಮತ್ತಲ್ಲಿ ಯಾಕೆ ಅಂತ ಕೇಳದೆ ಕೈಗೆ ಸಿಕ್ಕ ಕಟ್ಟಿಗೇಲಿ ಬಾಸಳ ಮೂಡೊ ಹಂಗೆ ಹೊಡ್ದಿದ್ದ. ಮತ್ತೆ ಒತಾರೆ ಎದ್ದು ಗಂಡನ ಜೊತೆ ವಿಧಿಯಿಲ್ಲದೆ ಪಟೇಲರ ಹೊಲಕ್ಕೆ ಹೋಗಿದ್ದಳು. ಪಟೇಲಪ್ಪ ಒಂದ್ಹೆಜ್ಜೆ ಹಿಂದೆ ಸರಿದಂತೆ ಕಾಣ್ತಿದ್ದ. ಈಗೀಗ ಸಣ್ಣೀರಂಗೆ ಸಾರಾಯಿ ಕುಡಿಯಾಕೆ ಮತ್ತಷ್ಟು ಭಕ್ಷೀಸು ಸಿಗ್ತಿತ್ತು. ಆರು ವರ್ಷದವನಾದ ಬಸ್ಯ ಈಗ ಸಾಲಿಗೆ ಸೇರಿದ್ದ. ಕುಡಿದು ಕುಡಿದು ಬಂದು ಮಲಗ್ತಿದ್ದ ಸಣ್ಣೀರ ಹೆಂಡ್ತಿ ಮೇಲೆ ಕಾಲು ಹಾಕುವುದನ್ನೂ ಮರೆತಿದ್ದ. ಹೆಂಡತಿ ಬಸುರಿ ಆದಾಗಲೂ ಬಿಡದಂತೆ ಸೇರಿದ್ದ ಸಣ್ಣೀರ ಈಗ ಅವಳು ಕೈಹಾಕಿದರೂ ಅದರ ಪರಿವಿಲ್ಲದೆ ಮಲಗಿಬಿಡುತ್ತಿದ್ದ. ಬಸ್ಯನ ನಂತರ ಮತ್ತೊಂದು ಕೂಸು ಸಾವಿತ್ರಿಗೆ ಆಗಲೇ ಇಲ್ಲ. ಯಾವ್ಯಾವ ಹೆಂಗಸರ ಜತೆ ಮಲ್ಗಿದೀನಿ ಅನ್ನೊದನ್ನ ಗುಟ್ಟಾಗಿ ಇಟ್ಟಿದ್ದ ಪಟೇಲಪ್ಪ ಈಗ ಆಳು ಕಲ್ಲನ ಮೂಲಕ ಹೊಸ ಸುದ್ದಿನ ಸಣ್ಣೀರನ ಕಿವಿಗೆ ಬೀಳೊ ಹಂಗೆ ಮಾಡಿದ. 'ಸಣ್ಣೀರನ ಹೆಂಡ್ತಿ ಸಾವಿತ್ರಿನ ಪಟೇಲ್ರು ಇಟ್ಕೊಂಡಿದಾರಂತೆ, ಸಾವಿತ್ರಿನೇ ದಿನಾಲೂ ಪಟೇಲ್ರ ಕರೆದು ಕರೆದು ಮಲಗ್ತಾಳಂತೆ...' ಅನ್ನುವ ಮಾತು ರಾತ್ರಿಯಾಗೋದ್ರೊಳಗೆ ಸಣ್ಣೀರನ ಕಿವಿಗೆ ಬಿತ್ತು.

ಪಟೇಲರು ಕೊಟ್ಟ ಕಾಸಲ್ಲೆ ಚೆನ್ನಾಗಿ ಕುಡಿದ ಸಣ್ಣೀರ ನಿಲ್ಲಲಾಗದಷ್ಟು ತೂರಾಡ್ತಿದ್ದ. ತೂರಾಡ್ತಲೇ ಪಟೇಲರ ಮನಿಮುಂದೆ ನಿಂತು ಪಟೇಲನಿಗೆ ಏನೇನೊ ಬೈದು ಮನೆದಾರಿ ಹಿಡಿದಿದ್ದ. ಮನೆಗೆ ಬಂದವನೆ ಹೆಂಡ್ತಿ ಕೂದಲು ಹಿಡಿದು ಎಳೆದಾಡಿದ. 'ಪಟೇಲ್ರದು ಬೇಕೇನೆ ನಿಂಗೆ ಪಟೇಲ್ರದು. ನಂದು ಸಾಲ್ದಾ ನಿಂಗೆ? ನಂದು ಹಳೇದು ಆತ ನಿಂಗೆ... ಹಳೇದು...' ಅಂತ ಅರೆಬರೆ